# ಸೀರೆಗೆ ಸೊಗಸು ಉದ್ದನೆ ಜಾಕೆಟ್

ಸಾಂಪ್ರದಾಯಿಕ ಸೀರೆಯ ಮೇಲೆ ಉದ್ದನೆಯ ಜಾಕೆಟ್ ಧರಿಸುವುದು ಈಗಿನ ಟ್ರೆಂಡ್. ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ಇಂಥ ಜಾಕೆಟ್ ಧರಿಸಿದರೆ ರಾಯಲ್ ಲುಕ್ ಪಡೆಯಬಹುದು. ಸಾಂಪ್ರದಾಯಿಕ–ಆಧುನಿಕ ಎರಡೂ ಮನೋಭಾವದವರಿಗೆ ಇಂಥ ಉಡುಪು ಸೂಕ್ತ ಎನಿಸುತ್ತವೆ.

■ ಆಶಾ ಎಸ್. ಕುಲಕರ್ಣಿ



ಸಾಂಪ್ರದಾಯಿಕ ಉಡುಪು ಸೀರೆ ಇಂದು ಬರೀ ಪಾರಂಪರಿಕ ಉಡುಗೆಯಾಗಿ ಉಳಿದಿಲ್ಲ. ಅದು ಫ್ಯಾಷನ್‌ನ ಒಂದು ಭಾಗವಾಗಿಯೂ ಮೆರೆಯುತ್ತಿದೆ. ಆದರೆ ಯಾವುದೇ ಪಾಶ್ಚಾತ್ಯ ಉಡುಪು ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟರೂ ಸೀರೆ ತನ್ನ ಸ್ಥಾನವನ್ನು ಬಿಟ್ಟು ಕೊಡದೇ ಗಟ್ಟಿಯಾಗಿ ನಿಂತಿದೆ. ಜೊತೆಗೆ ಇನ್ನಷ್ಟು ನವನವೀನ ವಿನ್ಯಾಸದೊಂದಿಗೆ ಕಂಗೊಳಿಸುತ್ತಿದೆ. ಸೀರೆಗಳ ಜೊತೆ ಧರಿಸುವ ರವಿಕೆಗಳಲ್ಲಿಯೂ ಕೂಡ ವೈವಿಧ್ಯತೆ ಇದೆ. ಸೀರೆಯ ಮೇಲೆ ಧರಿಸಲು ಲಾಂಗ್ ಜಾಕೆಟ್‌ಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟಿದ್ದು, ಸಾಂಪ್ರದಾಯಿಕತೆಗೆ ಆಧುನಿಕತೆಯೂ ತಳುಕು ಹಾಕಿಕೊಂಡಿದೆ. ಇದು ಫ್ಯಾಷನ್ ಲೋಕದಲ್ಲಿ ಒಂದು ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿದೆ.

ಸೀರೆಯ ಜೊತೆ ಲಾಂಗ್ ಜಾಕೆಟ್ ಧರಿಸಬಹುದೇ, ಒಂದು ವೇಳೆ ಧರಿಸಿಕೊಂಡರೂ ಚೆನ್ನಾಗಿ ಕಾಣಿಸಬಹುದೇ ಎಂಬುದು ಫ್ಯಾಷನ್‌ಪ್ರಿಯರ ಪ್ರಶ್ನೆ. ಕಾರಣ ಈ ತರಹದ ಲಾಂಗ್ ಜಾಕೆಟ್, ಶಾರ್ಟ್ ಜಾಕೆಟ್‌ಗಳನ್ನು ಬರೀ ಜೀನ್ಸ್, ಮಿಡಿ ಈ ತರಹದ ಪಾಶ್ಚಾತ್ಯ ದಿರಿಸುಗಳ ಜೊತೆ ಮ್ಯಾಚ್ ಮಾಡಿ ಧರಿಸುವುದನ್ನು ನೋಡಿರುತ್ತೇವೆ. ಇದೀಗ ಈ ರೀತಿಯ ತರಹೇವಾರಿ ಲಾಂಗ್ ಜಾಕೆಟ್‌ಗಳನ್ನು ಸೀರೆಯ ಮೇಲೂ ಮ್ಯಾಚ್ ಮಾಡಿ ಧರಿಸಬಹುದು ಎಂಬುದನ್ನು ಫ್ಯಾಷನಿಸ್ಟ್‌ಗಳು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಯಶಸ್ಸನ್ನೂ ಕಂಡಿದ್ದಾರೆ. ಸೀರೆ ಭಾರತೀಯರ ಸಾಂಪ್ರದಾಯಿಕ ಉಡುಪು ಹಾಗೇ ಜಾಕೆಟ್ ವೆಸ್ಟರ್ನ್ ಉಡುಪು. ಇವೆರಡರ ಕಾಂಬಿನೇಷನ್ ತುಂಬಾ ಅಪರೂಪ. ಈ ತರಹದ ಸೀರೆಯ ಜೊತೆ ಜಾಕೆಟ್ ಫ್ಯಾಷನ್ ಇದೀಗ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

ಫ್ಯಾಷನ್ ಕ್ವೀನ್‌ಗಳೆಂದೇ ಬಾಲಿವುಡ್‌ನಲ್ಲಿ ಹೆಸರುವಾಸಿಯಾಗಿರುವ ಸೋನಂ ಕಪೂರ್, ಜಾಕ್ವಲಿನ್ ಫರ್ನಾಂಡಿಸ್, ಕರೀನಾ ಕಪೂರ್, ವಿದ್ಯಾಬಾಲನ್, ಕಾಜೋಲ್ ಅವರಂತಹ ನಟಿಮಣಿಯರು ಕೂಡ ಈ ಟ್ರೆಂಡ್‌ಗೆ ಫಿದಾ ಆಗಿದ್ದಾರೆ. ತಾವು ಹೋಗುವ ಸಭೆ, ಸಮಾರಂಭಗಳಿಗೆ ಸೀರೆಗಳ ಮೇಲೆ ಈ ಲಾಂಗ್ ಜಾಕೆಟ್ ತೊಟ್ಟು ಮಿಂಚುತ್ತಿದ್ದಾರೆ.

ಈ ಲಾಂಗ್ ಜಾಕೆಟ್‌ಗಳು ಸಾಂಪ್ರದಾಯಿಕ ಉಡುಗೆಗೂ, ಆಧುನಿಕ ಉಡುಗೆಗೂ ಸೈ ಎನ್ನುವಂತಿವೆ. ಕಾಟನ್, ಫ್ಯಾನ್ಸಿ, ಖಾದಿ, ಕ್ರೇಪ್ ಹೀಗೆ ಎಲ್ಲ ರೀತಿಯ ಸೀರೆಗಳಿಗೆ ಈ ಲಾಂಗ್ ಜಾಕೆಟ್ ಅನ್ನು ಮಿಕ್ಸ್ ಮ್ಯಾಚ್ ಮಾಡಿ ಧರಿಸಬಹುದು. ಇದರಿಂದಾಗಿ ಸ್ಟೈಲಿಷ್ ಲುಕ್ ನಿಮ್ಮದಾಗುತ್ತದೆ. ಇಷ್ಟೇ ಅಲ್ಲದೆ ಈ ತರಹದ ಜಾಕೆಟ್ ಸೀರೆಯನ್ನು ಗುಜರಾತಿ ಶೈಲಿಯಂತೆಯೂ ಮುಂದೆ ಸೆರಗು ಹಾಕಿಕೊಳ್ಳಬಹುದು. ಪ್ಲೇನ್ ಸೀರೆಗಳಿಗೆ ಎಂಬ್ರಾಯ್ಡರಿ

